# ಕರ್ನಾಟಕ ವಿಧಾನ ಪರಿಷತ್ತು

## ನೂರ ಮೂವತ್ತೈದನೆಯ ಅಧಿವೇಶನ

## ಸಾರಾಂಶ

ದಿನಾಂಕ: 02.07.2018 ರಿಂದ 12.07.2018ವರೆಗೆ

ಕರ್ನಾಟಕ ವಿಧಾನ ಪರಿಷತ್ತಿನ ಸಚಿವಾಲಯ
ವಿಧಾನ ಸೌಧ, ಬೆಂಗಳೂರು–560 001

*********

## ಕರ್ನಾಟಕ ವಿಧಾನ ಪರಿಷತ್ತು

ವಿಧಾನ ಪರಿಷತ್ತಿನ ನೂರ ಮೂವತ್ತೈದನೆಯ ಅಧಿವೇಶನವು ದಿನಾಂಕ: 02.07.2018 ರಿಂದ 12.07.2018ರ ವರೆಗೆ ಒಟ್ಟು 09 ದಿನಗಳ ಉಪವೇಶನ ನಡೆಯಿತು. ಅಧಿವೇಶನದ ಒಟ್ಟು ಅವಧಿ 50 ಗಂಟೆ 58 ನಿಮಿಷಗಳು. **(ವಿವರಣಾ ಪಟ್ಟಿ-1)**

### 01. ರಾಜ್ಯಪಾಲರ ಭಾಷಣ

ದಿನಾಂಕ: 02.07.2018ರಂದು ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಸದಸ್ಯರುಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. ಸದರಿ ಭಾಷಣದ ಮೇಲಿನ ವಂದನಾರ್ಪಣಾ ಪ್ರಸ್ತಾವವನ್ನು ದಿನಾಂಕ:04.07.2018ರಂದು ಅಂಗೀಕರಿಸಲಾಯಿತು.

### 02. ಸಂತಾಪ ಸೂಚನೆಗಳು

**ಈ ಕೆಳಕಂಡ ಗಣ್ಯವ್ಯಕ್ತಿಗಳು ನಿಧನರಾದುದಕ್ಕೆ ಸದನದಲ್ಲಿ ಸಂತಾಪವನ್ನು ವ್ಯಕ್ತಪಡಿಸಲಾಯಿತು.**

| ಕ್ರ. ಸಂ. | ಹೆಸರು | ಹೊಂದಿದ ಸ್ಥಾನಮಾನ | ದಿನಾಂಕ |
|---|---|---|---|
| 01 | ನ್ಯಾಮಗೌಡ ಸಿದ್ದು ಭೀಮಪ್ಪ | ವಿಧಾನ ಸಭೆಯ ಹಾಲಿ ಸದಸ್ಯರು ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 02.07.2018 |
| 02 | ಕೆ. ಹೆಚ್. ಹನುಮೇಗೌಡ | ವಿಧಾನ ಸಭೆ ಹಾಗೂ ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 02.07.2018 |
| 03 | ಸಯದ್ ಮುಧೀರ್ ಆಗಾ | ವಿಧಾನ ಪರಿಷತ್ತಿನ ಮಾಜಿ ಸದಸ್ಯರು | 02.07.2018 |
| 04 | ಟಿ.ಹೆಚ್ ನಾರಾಯಣಸ್ವಾಮಿ | ವಿಧಾನ ಪರಿಷತ್ತಿನ ಮಾಜಿ ಮುಖ್ಯ ಸಚೇತಕರು | 02.07.2018 |
| 05 | ಡಾ: ಮಹಾದೇವಪ್ಪ ಶಿವಬಸಪ್ಪ ಪಟ್ಟಣ. | ವಿಧಾನ ಸಭೆಯ ಮಾಜಿ ಸದಸ್ಯರು ಮತ್ತು ಸ್ವಾತಂತ್ರ್ಯ ಹೋರಾಟಗಾರರು | 02.07.2018 |
| 06 | ಬಿ.ಎ.ಮೊಹಿದ್ದೀನ್ | ವಿಧಾನ ಸಭೆ ಮತ್ತು ವಿಧಾನ ಪರಿಷತ್ತಿನ ಮಾಜಿ ಸದಸ್ಯರು ಹಾಗೂ ಸಚಿವರು | 10.07.2018 |

## 03. ಅಭಿನಂದನಾ ಪ್ರಸ್ತಾವ

ದಿನಾಂಕ: 03.07.2018ರಂದು ವಿಧಾನಸಭೆ, ಶಿಕ್ಷಕರ ಕ್ಷೇತ್ರ, ಪದವೀದರರ ಕ್ಷೇತ್ರಗಳಿಂದ ವಿಧಾನ ಪರಿಷತ್ತಿಗೆ ನೂತನವಾಗಿ ಚುನಾಯಿತರಾದ ಹಾಗೂ ವಿಧಾನ ಪರಿಷತ್ತಿಗೆ ಪುನರಾಯ್ಕೆಗೊಂಡಿರುವ ಈ ಕೆಳಕಂಡ ಮಾನ್ಯ ಸದಸ್ಯರುಗಳಿಗೆ ಮಾನ್ಯ ಸಭಾಪತಿಯವರು ಅಭಿನಂದನೆಯನ್ನು ಸಲ್ಲಿಸಿದರು.

**ಶ್ರೀಯುತರುಗಳಾದ:**

01. ಅರವಿಂದ ಕುಮಾರ್ ಅರಳಿ
02. ಕೆ.ಹರೀಶ್ ಕುಮಾರ್
03. ಡಾ:ಚಂದ್ರಶೇಖರ್ ಬಿ.ಪಾಟೀಲ್
04. ಡಾ: ತೇಜಸ್ವಿನಿಗೌಡ
05. ಕೆ.ಪಿ.ನಂಜುಂಡಿ ವಿಶ್ವಕರ್ಮ
06. ಎನ್.ರವಿಕುಮಾರ್
07. ಎಸ್.ರುದ್ರೇಗೌಡ
08. ಆಯನೂರು ಮಂಜುನಾಥ್
09. ಅ.ದೇವೇಗೌಡ
10. ಎಸ್.ಎಲ್.ಧರ್ಮೇಗೌಡ
11. ಬಿ.ಎಂ.ಫಾರೂಕ್
12. ಎಸ್.ಎಲ್.ಭೋಜೇಗೌಡ
13. ಸಿ.ಎಂ.ಇಬ್ರಾಹಿಂ
14. ಕೆ.ಗೋವಿಂದರಾಜು
15. ರಘುನಾಥ್‌ರಾವ್ ಮಲ್ಕಾಪೂರೆ
16. ಡಾ: ವೈ.ಎ.ನಾರಾಯಣಸ್ವಾಮಿ
17. ಮರಿತಿಬ್ಬೇಗೌಡ

## 04. ನೂತನ ಸಚಿವರುಗಳ ಪರಿಚಯ

01) **ದಿನಾಂಕ: 03.07.2018ರಂದು** ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

**ಶ್ರೀಯುತರುಗಳಾದ:**

01. ಎನ್.ಹೆಚ್. ಶಿವಶಂಕರ ರೆಡ್ಡಿ, ಮಾನ್ಯ ಕೃಷಿ ಸಚಿವರು
02. ಸಿ.ಪುಟ್ಟರಂಗಶೆಟ್ಟಿ, ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು
03. ಸಿ.ಎಸ್. ಪುಟ್ಟರಾಜು, ಮಾನ್ಯ ಸಣ್ಣ ನೀರಾವರಿ ಸಚಿವರು
04. ಯು.ಟಿ ಅಬ್ದುಲ್ ಖಾದರ್, ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು
05. ಸ.ರಾ.ಮಹೇಶ್, ಮಾನ್ಯ ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು
06. ಶಂಕರ್, ಮಾನ್ಯ ಅರಣ್ಯ, ಜೀವಿಶಾಸ್ತ್ರ ಹಾಗೂ ಪರಿಸರ ಸಚಿವರು

02) **ದಿನಾಂಕ: 04.07.2018ರಂದು** ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

**ಶ್ರೀಯುತರುಗಳಾದ:**

01. ಹೆಚ್.ಡಿ.ರೇವಣ್ಣ, ಮಾನ್ಯ ಲೋಕೋಪಯೋಗಿ ಸಚಿವರು
02. ಜಿ.ಟಿ.ದೇವೇಗೌಡ, ಮಾನ್ಯ ಉನ್ನತ ಶಿಕ್ಷಣ ಸಚಿವರು
03. ಎನ್.ಮಹೇಶ್, ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು
04. ಆರ್.ವಿ.ದೇಶಪಾಂಡೆ, ಮಾನ್ಯ ಕಂದಾಯ ಸಚಿವರು

03) **ದಿನಾಂಕ: 09.07.2018ರಂದು** ಶ್ರೀ ಶಿವಾನಂದ ಪಾಟೀಲ್, ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

04) **ದಿನಾಂಕ:10.07.2018ರಂದು** ಈ ಕೆಳಕಂಡ ನೂತನ ಸಚಿವರುಗಳನ್ನು ಮಾನ್ಯ ಸಭಾನಾಯಕರು ಸದನಕ್ಕೆ ಪರಿಚಯಿಸಿದರು.

**ಶ್ರೀಯುತರುಗಳಾದ:**

01. ವೆಂಕಟರಾವ್ ನಾಡಗೌಡ, ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು
02. ಮನಗೂಳಿ ಮಲ್ಲಪ್ಪ ಚನ್ನವೀರಪ್ಪ, ಮಾನ್ಯ ತೋಟಗಾರಿಕೆ ಸಚಿವರು
03. ಬಿ.ಜೆಡ್.ಜಮೀರ್ ಅಹಮದ್ ಖಾನ್, ಮಾನ್ಯ ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳು ಹಾಗೂ ಅಲ್ಪಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

## 05. ಕಾರ್ಯದರ್ಶಿಯವರ ವರದಿ

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ಘನತೆವೆತ್ತ ರಾಷ್ಟ್ರಪತಿಯವರಿಂದ ಹಾಗೂ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ದಿನಾಂಕ: 03.07.2018 ರಂದು ಕಾರ್ಯದರ್ಶಿಯವರು ಸದನದಲ್ಲಿ ಮಂಡಿಸಿದರು. **ವಿವರಣಾ ಪಟ್ಟಿ –2** ರಲ್ಲಿ ವಿವರಿಸಿದೆ.

## ೦6. ಪ್ರಶ್ನೆಗಳು

ದಿನಾಂಕ: 02.07.2018 ರಿಂದ 12.07.2018ರ ವರೆಗೆ ನಡೆದ ಅಧಿವೇಶನದಲ್ಲಿ ಒಟ್ಟು 345 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 60 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳಾಗಿ ಅಂಗೀಕರಿಸಲಾಗಿರುತ್ತದೆ. ಅವುಗಳ ಪೈಕಿ 48 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಹಾಗೂ ಲಿಖಿತ ಮೂಲಕ ಉತ್ತರಿಸುವ ಒಟ್ಟು 285 ಪ್ರಶ್ನೆಗಳ ಪೈಕಿ 219 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರವನ್ನು ಮಂಡಿಸಲಾಯಿತು.

## 07. ಶೂನ್ಯವೇಳೆ

ಪ್ರಸ್ತುತ ಅಧಿವೇಶನದಲ್ಲಿ ಶೂನ್ಯವೇಳೆಯಲ್ಲಿ ಪ್ರಸ್ತಾಪಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 3 ರಲ್ಲಿ ವಿವರಿಸಿದೆ.

## 08. ಸಭೆಯ ಮುಂದಿಡಲಾದ ಕಾಗದ ಪತ್ರಗಳು

01. ಪ್ರಸ್ತುತ ಅಧಿವೇಶನದಲ್ಲಿ ಒಟ್ಟು 03 ಪಟ್ಟಿಗಳನ್ನು ಸಭೆಯ ಮುಂದೆ ಮಂಡಿಸಲಾಯಿತು. (ವಿವರಣಾ ಪಟ್ಟಿ– 4)

02. ದಿನಾಂಕ: 09.07.2018ರಂದು **ಶ್ರೀ ಹೆಚ್.ಡಿ.ಕುಮಾರಸ್ವಾಮಿ, (ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ ಮಾನ್ಯ ಸಭಾನಾಯಕರು** ಈ ಕೆಳಕಂಡ ವರದಿಗಳನ್ನು ಮಂಡಿಸಿದರು.

(ಅ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳ ಮೇಲಿನ 31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾಲೆಕ್ಕಪರಿಶೋಧಕರು ನೀಡಿರುವ ವರದಿ (ಸಂಖ್ಯೆ–1).

(ಆ) ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ ಸಾಮಾನ್ಯ ಮತ್ತು ಸಾಮಾಜಿಕ ವಲಯದ ಮೇಲಿನ 31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ವರದಿ (ಸಂಖ್ಯೆ–2).

03. ದಿನಾಂಕ: 12.07.2018ರಂದು **ಶ್ರೀ ಹೆಚ್.ಡಿ ಕುಮಾರಸ್ವಾಮಿ** (ಮಾನ್ಯ ಮುಖ್ಯಮಂತ್ರಿಗಳು) ಅವರ ಪರವಾಗಿ ಮಾನ್ಯ ಸಭಾನಾಯಕರು 4ನೇ ಹಣಕಾಸು ಆಯೋಗವು ರಾಜ್ಯದ ಪಂಚಾಯತ್ ರಾಜ್ ಸಂಸ್ಥೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮತ್ತು ಇತರೆ ಅಧಿಕಾರದ ಬಗ್ಗೆ ನೀಡಿರುವ ವರದಿ.

## 09. ಪ್ರಕಟಣೆ

01. ದಿನಾಂಕ: 02.07.2018ರಂದು ಡಾ: **ಜಯಮಾಲ ರಾಮಚಂದ್ರ,** ಮಾನ್ಯ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ, ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಹಾಗೂ ಕನ್ನಡ ಮತ್ತು ಸಂಸ್ಕೃತಿ ಸಚಿವರು ಇವರನ್ನು ವಿಧಾನ ಪರಿಷತ್ತಿನ ಸಭಾನಾಯಕರನ್ನಾಗಿ ನಾಮನಿರ್ದೇಶನ ಮಾಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

02. ದಿನಾಂಕ: 02.07.2018ರಂದು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಕೋಟ ಶ್ರೀನಿವಾಸ ಪೂಜಾರಿ** ಇವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ನಾಯಕರನ್ನಾಗಿ ಮಾನ್ಯತೆ ನೀಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

03. ದಿನಾಂಕ: 02.07.2018ರಂದು ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** ಅವರನ್ನು ವಿಧಾನ ಪರಿಷತ್ತಿನ ವಿರೋಧ ಪಕ್ಷದ ಮುಖ್ಯ ಸಚೇತಕರನ್ನಾಗಿ ನೇಮಕ ಮಾಡಲಾಗಿದೆ ಎಂದು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

04. ದಿನಾಂಕ: 02.07.2018ರಂದು ಮಾನ್ಯ ಸಭಾಪತಿಯವರ ಮತ್ತು ಉಪ ಸಭಾಪತಿಯವರ ಗೈರುಹಾಜರಿಯಲ್ಲಿ ಸಭಾಪತಿಯವರ ಸ್ಥಾನದಲ್ಲಿ ಪದಧಾರಣೆ ಮಾಡುವ ಸದಸ್ಯರುಗಳ ಪಟ್ಟಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

05. ದಿನಾಂಕ: 03.07.2018ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯನ್ನು ರಚಿಸಲಾಗಿರುವ ಬಗ್ಗೆ ಮಾನ್ಯ ಸಭಾಪತಿಯವರು ಪ್ರಕಟಿಸಿದರು.

06. ದಿನಾಂಕ: 03.07.2018ರಂದು ಕಾರ್ಯಕಲಾಪಗಳ ಸಲಹಾ ಸಮಿತಿಯ ವರದಿಯನ್ನು ಮಾನ್ಯ ಸಭಾಪತಿಯವರು ಪ್ರಕಟಿಸಿದರು.

07. ದಿನಾಂಕ: 05.07.2018ರಂದು ಮಾನ್ಯ ಸಭಾಪತಿಯವರು "ಮಹಿಳಾ ಸಬಲೀಕರಣ. ಮಹಿಳಾ ಸಾಕ್ಷರತೆ, ಸ್ವಚ್ಛ ಭಾರತ್ ಅಭಿಯಾನವನ್ನು ಸಮಾಜಕ್ಕೆ ಸಾರುವ ಈ ಸಾಲಿನ (2018-19) ರಾಷ್ಟ್ರ ಪ್ರಶಸ್ತಿಗೆ ಪುರಸ್ಕೃತವಾಗಿರುವ **"ಹೆಬ್ಬೆಟ್ಟು ರಾಮಕ್ಕ"** ಎಂಬ ಮಹಿಳಾ ಪ್ರಧಾನ ಚಿತ್ರದಲ್ಲಿ ನಮ್ಮ ಸದನದ ಹಾಲಿ ಸದಸ್ಯರಾದ ಶ್ರೀಮತಿ ತಾರಾಅನೂರಾಧರವರು ನಟಿಸಿದ್ದು, ಸದರಿ ಚಲನಚಿತ್ರವನ್ನು ಬೆಂಗಳೂರು ನಗರದ ಕನ್ನಿಂಗ್‌ಹ್ಯಾಮ್ ರಸ್ತೆಯಲ್ಲಿರುವ ಚಾಮುಂಡೇಶ್ವರಿ ಸ್ಟೂಡಿಯೋದಲ್ಲಿ ಈ ದಿನ ಸಂಜೆ 4.30 ಘಂಟೆಗೆ ಪ್ರದರ್ಶಿಸಲಾಗುವುದು. ಮಾನ್ಯ ಸದಸ್ಯರಾದ **ಶ್ರೀಮತಿ ತಾರಾಅನುರಾಧ** ಅವರು ಮಾನ್ಯ ಎಲ್ಲಾ ಶಾಸಕರುಗಳನ್ನು ಈ ಚಲನ ಚಿತ್ರವನ್ನು ವೀಕ್ಷಿಸಲು ಆಮಂತ್ರಣವನ್ನು ನೀಡಿರುತ್ತಾರೆಂಬ" ವಿಷಯವನ್ನು ಪ್ರಕಟಿಸಿದರು.

08. ದಿನಾಂಕ: 05.07.2018ರಂದು ಮಾನ್ಯ ಸಭಾಪತಿಯವರು " ನಮ್ಮ ಸಹೋದರ ರಾಷ್ಟ್ರವಾದ ನೇಪಾಳಕ್ಕೆ **' ಕೈಲಾಸ ಮಾನಸ ಸರೋವರ ಯಾತ್ರೆ '** ಗೆ ಹೋಗಿರುವ ರಾಜ್ಯದ ಯಾತ್ರಿಕರುಗಳು ಪ್ರಕೃತಿ ವಿಕೋಪಕ್ಕೆ ಸಿಲುಕಿ, ತತ್ತರಿಸಿ ಕಾಣೆಯಾಗಿರುವ ಬಗ್ಗೆ ಈ ಸದನ ಗಂಭೀರ ಚಿಂತನೆ ನಡೆಸಿ ಆ ಯಾತ್ರಿಕರುಗಳನ್ನು ಗುರುತಿಸಿ, ಪತ್ತೆ ಹಚ್ಚಿ ಸುರಕ್ಷಿತವಾಗಿ ನಮ್ಮ ರಾಜ್ಯಕ್ಕೆ ಮರಳಿಸಲು ತುರ್ತುಕ್ರಮ ಕೈಗೊಳ್ಳುವಂತೆ ಸದನದ ಮೂಲಕ ಸರ್ಕಾರವನ್ನು ವಿನಂತಿಸುತ್ತೇನೆ " ಎಂದು ಪ್ರಕಟಿಸಿದರು.

### 10. ಗಮನ ಸೆಳೆಯುವ ಸೂಚನೆಗಳು

ಪ್ರಸ್ತುತ ಅಧಿವೇಶನದಲ್ಲಿ ನಿಯಮ 72ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 5 ರಲ್ಲಿ ವಿವರಿಸಲಾಗಿದೆ.

### 11. ನಿಯಮ 330ರ ಮೇರೆಗೆ

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 6ರಲ್ಲಿ ವಿವರಿಸಲಾಗಿದೆ.

### 12. ನಿಯಮ 330ಎ ಮೇರೆಗೆ

ಪ್ರಸ್ತುತ ಅಧಿವೇಶನದಲ್ಲಿ ನಿಯಮ 330ಎ–ರಡಿಯಲ್ಲಿ ಚರ್ಚಿಸಿದ ಸೂಚನೆಗಳನ್ನು ವಿವರಣಾ ಪಟ್ಟಿ – 7ರಲ್ಲಿ ವಿವರಿಸಲಾಗಿದೆ.

### 13. ವರದಿಗಳನೊಪ್ಪಿಸುವುದು

ಪ್ರಸ್ತುತ ಅಧಿವೇಶನದಲ್ಲಿ ಒಪ್ಪಿಸಲಾದ ವರದಿಗಳ ಮಾಹಿತಿಯನ್ನು ವಿವರಣಾ ಪಟ್ಟಿ – 8 ರಲ್ಲಿ ವಿವರಿಸಲಾಗಿದೆ.

### 14. ಶಾಸನ ರಚನೆ

ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ಪಟ್ಟಿಯನ್ನು ವಿವರಣಾ ಪಟ್ಟಿ–9ರಲ್ಲಿ ತೋರಿಸಲಾಗಿದೆ.

**15. ವಿತ್ತೀಯ ಕಾರ್ಯಕಲಾಪಗಳು**

**ದಿನಾಂಕ: 05.07.2018ರಂದು ಶ್ರೀ ಹೆಚ್.ಡಿ ಕುಮಾರಸ್ವಾಮಿ,** ಮಾನ್ಯ ಮುಖ್ಯಮಂತ್ರಿಗಳು ಹಾಗೂ ಹಣಕಾಸು ಸಚಿವರು, ಅವರ ಪರವಾಗಿ ಮಾನ್ಯ ಸಭಾನಾಯಕರು 2018–19ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದಲ್ಲಿ ಮಂಡಿಸಿದರು.

**16. ಚುನಾವಣಾ ಪ್ರಸ್ತಾವಗಳು**

01. ದಿನಾಂಕ:06.07.2018ರಂದು 2018–19ನೇ ಸಾಲಿನ ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಸದಸ್ಯರುಗಳನ್ನು ಚನಾಯಿಸುವ ಬಗ್ಗೆ ಚುನಾವಣಾ ಪ್ರಸ್ತಾವವನ್ನು ಮಂಡಿಸಲಾಯಿತು.

02. ದಿನಾಂಕ:12.07.2018ರಂದು ವಿಧಾನ ಮಂಡಲದ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶನ ಮಾಡಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಬಗ್ಗೆ ಮಾನ್ಯ ಸಭಾನಾಯಕರು ಚುನಾವಣಾ ಪ್ರಸ್ತಾವವನ್ನು ಮಂಡಿಸಿ ಅಂಗೀಕರಿಸಲಾಯಿತು.

**17. ಧರಣಿ ಮತ್ತು ಸಭಾತ್ಯಾಗ**

01. ದಿನಾಂಕ:04.07.2018ರಂದು ರಾಮಮಂದಿರ ನಿರ್ಮಾಣ ಸಂಬಂಧದಲ್ಲಿ ಮಾನ್ಯ ಮುಖ್ಯಮಂತ್ರಿಗಳು ನೀಡಿದ ಹೇಳಿಕೆಯನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತ್ರತ್ವದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸದನದ ಬಾವಿಯಲ್ಲಿ ಧರಣಿ ನಡೆಸಿದರು.

02. ದಿನಾಂಕ:12.07.2018ರಂದು ಮಾನ್ಯ ಮುಖ್ಯಮಂತ್ರಿಗಳು ಆಯವ್ಯಯದ ಮೇಲಿನ ಚರ್ಚೆಗೆ ನೀಡಿದ ಉತ್ತರವನ್ನು ವಿರೋಧಿಸಿ ಮಾನ್ಯ ವಿರೋಧ ಪಕ್ಷದ ನಾಯಕರ ನೇತೃತ್ವದಲ್ಲಿ ವಿರೋಧ ಪಕ್ಷದ ಮಾನ್ಯ ಸದಸ್ಯರುಗಳು ಸಭಾತ್ಯಾಗ ಮಾಡಿದರು.

**18. ಅಧಿವೇಶನ ಮುಂದೂಡಿಕೆ**

ದಿನಾಂಕ:02.07.2018ರಂದು ಪ್ರಾರಂಭಗೊಂಡ ವಿಧಾನ ಪರಿಷತ್ತಿನ 135ನೇಯ ಅಧಿವೇಶನವನ್ನು ದಿನಾಂಕ:12.07.2018ರಂದು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು.

**ಕೆ.ಆರ್.ಮಹಾಲಕ್ಷ್ಮಿ**
**ಕಾರ್ಯದರ್ಶಿ**

**ವಿವರಣಾ ಪಟ್ಟಿ – 1**

| ಕ್ರಮ ಸಂಖ್ಯೆ | ಅಧಿವೇಶನ ನಡೆದ ದಿನಾಂಕ | ಪ್ರಾರಂಭಗೊಂಡ ಸಮಯ | ಅಂತ್ಯಗೊಂಡ ಸಮಯ | ಒಟ್ಟು ಸಮಯ |
|---|---|---|---|---|
| 1. | 02.07.2018 | ಮ: 01.41 | ಮ:02.02 | 00.21 |
| 2. | 03.07.2018 | ಬೆ:10.30<br>ಮ:03.20 | ಮ:01.14<br>ಸಂ:07.10 | 06.34 |
| 3. | 04.07.2018 | ಬೆ:10.35<br>ಮ:02.43 | ಮ:01.24<br>ಸಂ:07.20 | 07.32 |
| 4. | 05.07.2018 | ಬೆ:11.30 | ಮ:12.10 | 00.40 |
| 5. | 06.07.2018 | ಬೆ:10.40<br>ಮ:01.08 | ಮ:12.33<br>ಮ:02.52 | 04.22 |
| 6. | 07.07.2018 | **ರಜಾ ದಿನಗಳು** | | |
| 7. | 08.07.2018 | | | |
| 8. | 09.07.2018 | ಬೆ:10.40<br>ಮ:03.13 | ಮ:01.39<br>ಸಂ:06.14 | 06.02 |
| 9. | 10.07.2018 | ಬೆ:10.10<br>ಮ: 03.28 | ಮ: 01.50<br>ರಾ: 07.52 | 08.01 |
| 10. | 11.07.2018 | ಬೆ: 11.10<br>ಮ:03.02 | ಮ: 01.30<br>ರಾ: 07.45 | 07.03 |
| 11. | 12.07.2018 | ಬೆ:10.15<br>ಮ:03.27 | ಮ:01.58<br>ರಾ:10.00 | 10.23 |
| | | | ಒಟ್ಟು ಸಮಯ: | 50.58 |

**ವಿವರಣಾ ಪಟ್ಟಿ–2**
**ಘನತೆವೆತ್ತ ರಾಷ್ಟ್ರಪತಿ ಮತ್ತು ರಾಜ್ಯಪಾಲರಿಂದ ಒಪ್ಪಿಗೆ**
**ಪಡೆದಿರುವ ವಿಧೇಯಕಗಳ ಪಟ್ಟಿ**

| ಕ್ರಮ ಸಂಖ್ಯೆ | ವಿಧೇಯಕಗಳು | ಒಪ್ಪಿಗೆಯನ್ನು ಪಡೆದ ದಿನಾಂಕ | ಒಪ್ಪಿಗೆಯನ್ನು ನೀಡಿದವರು |
|---|---|---|---|
| 01. | ಕರ್ನಾಟಕ ನಗರಾಭಿವೃದ್ಧಿ ಪ್ರಾಧಿಕಾರಗಳ (ತಿದ್ದುಪಡಿ) ವಿಧೇಯಕ, 2017 | 16.12.2017 | ರಾಜ್ಯಪಾಲರು |
| 02. | ಕರ್ನಾಟಕ ಮರಗಳ ಸಂರಕ್ಷಣೆ (ತಿದ್ದುಪಡಿ) ವಿಧೇಯಕ, 2016 | 30.12.2016 | ರಾಜ್ಯಪಾಲರು |
| 03. | ಕರ್ನಾಟಕ ಖಾಸಗಿ ವೈದ್ಯಕೀಯ ಸಂಸ್ಥೆಗಳ (ತಿದ್ದುಪಡಿ) ವಿಧೇಯಕ, 2017 | 04.01.2018 | ರಾಜ್ಯಪಾಲರು |
| 04. | ಪ್ರಾಣಿಗಳಿಗೆ ಹಿಂಸಾಚಾರ ಮಾಡುವುದನ್ನು ತಡೆಗಟ್ಟುವ (ಕರ್ನಾಟಕ ಎರಡನೇ ತಿದ್ದುಪಡಿ) ವಿಧೇಯಕ, 2017 | 10.02.2018 | ರಾಷ್ಟ್ರಪತಿಯವರು |
| 05. | ಚಾಲುಕ್ಯ ಪಾರಂಪರಿಕ ಪ್ರದೇಶ ನಿರ್ವಹಣಾ ಪ್ರಾಧಿಕಾರ ವಿಧೇಯಕ,2017 | 22.02.2018 | ರಾಜ್ಯಪಾಲರು |
| 06. | ಕರ್ನಾಟಕ ವೃತ್ತಿಗಳ,ಕಸಬುಗಳ, ಆಜೀವಿಕೆಗಳ ಮತ್ತು ಉದ್ಯೋಗಿಗಳ ಮೇಲಣ ತೆರಿಗೆ (ತಿದ್ದುಪಡಿ) ವಿಧೇಯಕ, 2018 | 05.03.2018 | ರಾಜ್ಯಪಾಲರು |
| 07. | ಕರ್ನಾಟಕ ಧನವಿನಿಯೋಗ (ಲೇಖಾನುದಾನ) ವಿಧೇಯಕ, 2018 | 05.03.2018 | ರಾಜ್ಯಪಾಲರು |
| 08. | ಕರ್ನಾಟಕ ಧನವಿನಿಯೋಗ ವಿಧೇಯಕ, 2018 | 05.03.2018 | ರಾಜ್ಯಪಾಲರು |
| 09. | ಪಿಲಿಕುಳ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 | 07.03.2018 | ರಾಜ್ಯಪಾಲರು |
| 10. | ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರ (ತಿದ್ದುಪಡಿ) ವಿಧೇಯಕ, 2018 | 07.03.2018 | ರಾಜ್ಯಪಾಲರು |
| 11. | ಬನವಾಸಿ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 | 07.03.2018 | ರಾಜ್ಯಪಾಲರು |
| 12. | ಕರ್ನಾಟಕ ಆಧಾರ್ (ಹಣಕಾಸು ಮತ್ತು ಇತರೆ ಸಬ್ಸಿಡಿಗಳು, ಪ್ರಯೋಜನಗಳು ಮತ್ತು ಸೇವೆಗಳ ಉದ್ದೇಶಿತ ವಿತರಣೆ) ವಿಧೇಯಕ, 2018 | 07.03.2018 | ರಾಜ್ಯಪಾಲರು |
| 13. | ನಾಡಪ್ರಭು ಕೆಂಪೇಗೌಡ ಪಾರಂಪರಿಕ ತಾಣದ ಅಭಿವೃದ್ಧಿ ಪ್ರಾಧಿಕಾರ ವಿಧೇಯಕ, 2018 | 12.03.2018 | ರಾಜ್ಯಪಾಲರು |

| | | | |
|---|---|---|---|
| 14. | ಅಂತರ್–ವಿಷಯ ಆರೋಗ್ಯ ವಿಜ್ಞಾನಗಳು ಮತ್ತು ತಂತ್ರಜ್ಞಾನ ಸಂಸ್ಥೆ (ತಿದ್ದುಪಡಿ) ವಿಧೇಯಕ, 2017 | 12.03.2018 | ರಾಜ್ಯಪಾಲರು |
| 15. | ಕರ್ನಾಟಕ ಭೂ ಕಂದಾಯ (ತಿದ್ದುಪಡಿ) ವಿಧೇಯಕ, 2018 | 13.03.2018 | ರಾಜ್ಯಪಾಲರು |
| 16. | ಕರ್ನಾಟಕ ರಾಜ್ಯ ಕಾನೂನು ವಿಶ್ವವಿದ್ಯಾಲಯ (ತಿದ್ದುಪಡಿ) ವಿಧೇಯಕ, 2018 | 16.03.2018 | ರಾಜ್ಯಪಾಲರು |
| 17. | ಕರ್ನಾಟಕ ಕೆರೆ ಸಂರಕ್ಷಣೆ ಮತ್ತು ಅಭಿವೃದ್ಧಿ ಪ್ರಾಧಿಕಾರ ಮತ್ತು ಕೆಲವು ಇತರ ಕಾನೂನು (ತಿದ್ದುಪಡಿ) ವಿಧೇಯಕ, 2018 | 23.03.2018 | ರಾಜ್ಯಪಾಲರು |
| 18. | ಅಮಿಟಿ ವಿಶ್ವವಿದ್ಯಾಲಯ ವಿಧೇಯಕ, 2018 | 19.04.2018 | ರಾಜ್ಯಪಾಲರು |
| 19. | ಜಗತ್ ವಿಶ್ವವಿದ್ಯಾಲಯ ವಿಧೇಯಕ, 2018 | 19.04.2018 | ರಾಜ್ಯಪಾಲರು |
| 20. | ಖಾಜಾ ಬಂದಾನವಾಜ್ ವಿಶ್ವವಿದ್ಯಾಲಯ ವಿಧೇಯಕ, 2018 | 19.04.2018 | ರಾಜ್ಯಪಾಲರು |
| 21. | ಶ್ರೀ ಸತ್ಯ ಸಾಯಿ ಮಾನವ ಅಭ್ಯುದಯ ವಿಶ್ವವಿದ್ಯಾಲಯ ವಿಧೇಯಕ, 2018 | 19.04.2018 | ರಾಜ್ಯಪಾಲರು |
| 22. | ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ವಿಶ್ವವಿದ್ಯಾಲಯ ವಿಧೇಯಕ, 2018 | 19.04.2018 | ರಾಜ್ಯಪಾಲರು |

## ವಿವರಣಾ ಪಟ್ಟಿ–3
## ಶೂನ್ಯವೇಳೆ ಪ್ರಸ್ತಾವಗಳು

| ಕ್ರ ಸಂ | ಸದಸ್ಯರ ಹೆಸರು | ಸದನದಲ್ಲಿ ಚರ್ಚಿಸಿದ ದಿನಾಂಕ | ವಿಷಯ | ಷರಾ |
|---|---|---|---|---|
| 01 | **ಶ್ರೀ ಎಂ.ಪಿ ಸುನೀಲ್ ಸುಬ್ರಮಣಿ** | 09.07.2018 | ಮೈಸೂರು–ತಲಚೇರಿ ರೈಲು ಮಾರ್ಗಕ್ಕೆ ಸರ್ವೆ ನಡೆಸುತ್ತಿರುವ ಬಗ್ಗೆ | ದಿ:10.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 02 | **ಶ್ರೀ ವೈ.ಎ ನಾರಾಯಣಸ್ವಾಮಿ ಮತ್ತು ಶ್ರೀ ಆರ್. ಚೌಡರೆಡ್ಡಿ ತೂಪಲ್ಲಿ** | 09.07.2018 | ಮಾವಿನ ಹಣ್ಣಿನ ಬೆಲೆ ಕುಸಿತಗೊಂಡಿರುವ ಬಗ್ಗೆ | ಮಾನ್ಯ ತೋಟಗಾರಿಕೆ ಸಚಿವರು ಉತ್ತರಿಸಿದರು. |
| 03 | **ಶ್ರೀ ಐವನ್ ಡಿ' ಸೋಜಾ** | 09.07.2018 | ಕರಾವಳಿಯಾದ್ಯಾಂತ ಮೀನುಗಳು ಕೆಡದಂತೆ ಇಡಲು ಅಪಾಯಕಾರಿ ಫಾರ್ಮಲಿನ ದ್ರಾವಣವನ್ನು ಬಳಸುತ್ತಿರುವ ಬಗ್ಗೆ | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 04 | **ಶ್ರೀ ಘೋಟ್ನೆಕರ ಶ್ರೀಕಾಂತ್ ಲಕ್ಷ್ಮಣ** | 09.07.2018 | ಮರಾಠ ಸಮುದಾಯವನ್ನು ಹಿಂದುಳಿದ ವರ್ಗಗಳ ಆಯೋಗದ ಶಿಫಾರಸ್ಸಿನಂತೆ 3 ಬಿ' ಯಿಂದ 2'ಎ' ಗೆ ಸೇರಿಸುವ ಬಗ್ಗೆ | ದಿ:11.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 05 | **ಶ್ರೀ ಟಿ.ಎ. ಶರವಣ** | 09.07.2018 | ರಾಜ್ಯ ಸರ್ಕಾರ ಘೋಷಿಸಿರುವ ಅನಿಲಭಾಗ್ಯ ಯೋಜನೆ ಕುರಿತು | ದಿ:11.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 06 | **ಶ್ರೀ ಮರಿತಿಬ್ಬೇಗೌಡ** | 10.07.2018 | ಹಾಸನ ಜಿಲ್ಲೆಯ ಸರ್ಕಾರಿ/ಅನುದಾನಿತ ಶಾಲೆಗಳ ಶೈಕ್ಷಣಿಕ ಜಿಲ್ಲಾಧಿಕಾರಿಗಳು ಪರೀಕ್ಷೆಗಳನ್ನು ನಡೆಸುವ ಉದ್ದೇಶ ಕುರಿತು | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 07 | **ಶ್ರೀ ಕೆ.ಪ್ರತಾಪಚಂದ್ರ ಶೆಟ್ಟಿ** | 10.07.2018 | ಕರ್ನಾಟಕ ಒನ್ ಕಾರ್ಯಕ್ರಮದ ಅಡಿಯಲ್ಲಿ ಸೇವೆ ಸಲ್ಲಿಸುತ್ತಿರುವ ಸಿಬ್ಬಂದಿಗಳಿಗೆ ಕನಿಷ್ಠ ವೇತನ ನೀಡದಿರುವ ಕುರಿತು | ದಿ:11.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 08 | **ಶ್ರೀ ಎಸ್.ನಾಗರಾಜು (ಸಂದೇಶ್ ನಾಗರಾಜು)** | 10.07.2018 | ಮೈಸೂರು ನಗರದ ನಜರ್‌ಬಾದ್ ಮೊಹಲ್ಲಾದ ವಾಣಿವಿಲಾಸ ರಸ್ತೆಯಲ್ಲಿ ಮೈಸೂರು ಮಾಲ್ ಎಂಬ ವಾಣಿಜ್ಯ ಸಂಕೀರ್ಣಕ್ಕೆ ಬರುವ ಜನರು ಸಾರ್ವಜನಿಕ ರಸ್ತೆಗಳಲ್ಲಿ ವಾಹನಗಳನ್ನು ನಿಲುಗಡೆ ಮಾಡುವುದರಿಂದ ಟ್ರಾಫಿಕ್ ಜಾಮ್ ಆಗಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |

| | | | | |
|---|---|---|---|---|
| 09 | **ಶ್ರೀ ಪ್ರದೀಪ್ ಶೆಟ್ಟರ್** | 10.07.2018 | ಗ್ರಾಮ ಸ್ವರಾಜ್ ಮತ್ತು ಕರ್ನಾಟಕ ಪಂಚಾಯತ್ ರಾಜ್ ಕಾಯ್ದೆ ಇದ್ದರು ಅನ್ಯ ಇಲಾಖೆಯ ಅಧಿಕಾರಿಗಳು ಆದೇಶ ಹೊರಡಿಸಿ ಕಾಯ್ದೆಯನ್ನು ಉಲ್ಲಂಘಿಸುತ್ತಿರುವ ಬಗ್ಗೆ | ದಿ:11.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 10 | **ಶ್ರೀ ಎಸ್.ವ್ಹಿ. ಸಂಕನೂರ** | 10.07.2018 | ಗದಗಿನ ತೋಂಟದಾರ್ಯ ಆವರಣಕ್ಕೆ ಹೊಂದಿಕೊಂಡಂತೆ ಕಾನೂನು ಬಾಹಿರವಾಗಿ ಪ್ರಾರಂಭಿಸಿರುವ ಮದ್ಯದಂಗಡಿಗಳ ನವೀಕರಣಕ್ಕೆ ಸಾರ್ವಜನಿಕರು ವಿರೋಧ ವ್ಯಕ್ತಪಡಿಸುತ್ತಿರುವ ಬಗ್ಗೆ | ದಿ:11.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 11 | **ಶ್ರೀ ಎಸ್. ರುದ್ರೇಗೌಡ** | 11.07.2018 | ಶರಾವತಿ ಮುಳುಗಡೆ ಸಂತ್ರಸ್ತ ರೈತರಿಗೆ ಅರಣ್ಯ ಇಲಾಖೆಯವರು ಕ್ರಿಮಿನಲ್ ಪ್ರಕರಣದ ಅಡಿಯಲ್ಲಿ ಕೇಸ್ ದಾಖಲು ಮಾಡಿರುವ ಬಗ್ಗೆ | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 12 | **ಡಾ: ತೇಜಸ್ವಿನಿಗೌಡ** | 11.07.2018 | ಶಶಿಧರ್, ಸುವರ್ಣ ವಿದ್ಯುತ್ ಅಪಘಾತಕ್ಕೆ ಸಿಲುಕಿ ಮೃತನಾಗಿದ್ದು, ಮುಖ್ಯಮಂತ್ರಿ ಪರಿಹಾರ ನಿಧಿಯಿಂದ ಪರಿಹಾರ ಹಾಗೂ ಸಹೋದರನಿಗೆ ಅನುಕಂಪದ ಆಧಾರದಲ್ಲಿ ಕೆಲಸ ನೀಡುವ ಬಗ್ಗೆ | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 13 | **ಶ್ರೀ ಟಿ.ಎ. ಶರವಣ** | 11.07.2018 | ರಾಜ್ಯದಲ್ಲಿ ಭಾರಿ ಮಳೆಯಿಂದ ಸಂಭವಿಸುತ್ತಿರುವ ನಷ್ಟಗಳಿಗೆ ಪರಿಹಾರ ನೀಡುವ ಬಗ್ಗೆ | ಮಾನ್ಯ ಕಂದಾಯ ಸಚಿವರು ಉತ್ತರಿಸಿದರು |
| 14 | **ಶ್ರೀಮತಿ ತಾರಾಅನೂರಾಧ** | 11.07.2018 | ಬೆಂಗಳೂರು ನಗರದಲ್ಲಿ ಪ್ರತಿದಿನ ನಡೆಯುವ ಮರಳುದಂಧೆಯನ್ನು ನಿಲ್ಲಿಸುವ ಹಾಗೂ ತೆರಿಗೆ ಹಣ ವಸೂಲಿ ಬಗ್ಗೆ ಪ್ರಸ್ತಾಪಿಸಿದರು | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 15 | **ಶ್ರೀ ಲಹರ್ ಸಿಂಗ್ ಸಿರೋಯಾ** | 11.07.2018 | ಕರ್ನಾಟಕ ಟ್ಯಾಂಕ್ ಕನ್ಸರ್ವೇಷನ್ ಅಂಡ್ ಡೆವಲಪ್‌ಮೆಂಟ್ ಅಥಾರಿಟಿ ಕಾಯ್ದೆಗೆ ತಿದ್ದುಪಡಿ ತರುವ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 16 | **ಶ್ರೀ ಎಂ.ಪಿ ಸುನಿಲ್ ಸುಬ್ರಮಣಿ** | 11.07.2018 | ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆಯ ಸುಬ್ರಮಣ್ಯ ಅರಣ್ಯ ವಲಯ, ಮತ್ತು ಪುಷ್ಪಗಿರಿ ಅರಣ್ಯ ವಲಯಗಳಲ್ಲಿ ಅಕ್ರಮ ಮರಳು ದಂಧೆ ನಡೆಯುತ್ತಿರುವ ಬಗ್ಗೆ | ದಿ:12.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 17 | **ಶ್ರೀ ಐವನ್ ಡಿ' ಸೋಜಾ** | 11.07.2018 | ವಿದ್ಯಾರ್ಥಿಗಳಿಗೆ ಉಚಿತ ಬಸ್ ಪಾಸ್ ನೀಡುವ ಬಗ್ಗೆ | ಮಾನ್ಯ ಸಾರಿಗೆ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| 18 | **ಶ್ರೀ ಎಸ್.ವ್ಹಿ ಸಂಕನೂರ** | 12.07.2018 | ಗದಗ ಜಿಲ್ಲೆ ರೋಣ ತಾಲ್ಲೂಕಿನಲ್ಲಿ ಹೆಸರು ಬೆಳೆ ಜಿಂಕೆಗಳ ಹಾವಳಿಯಿಂದ ಹಾಳಾಗುತ್ತಿರುವ ಬಗ್ಗೆ | ಮಾನ್ಯ ಅರಣ್ಯ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 19 | **ಶ್ರೀ ಕೆ.ಬಿ ಶಾಣಪ್ಪ** | 12.07.2018 | ರಾಯಚೂರು ಕೃಷಿ ವಿಶ್ವವಿದ್ಯಾಲಯದಲ್ಲಿ ಹೈದರಬಾದ್ ಕರ್ನಾಟಕ ಭಾಗದ ವಿದ್ಯಾರ್ಥಿಗಳಿಗೆ ಆರ್ಟಿಕಲ್ 371 (ಜೆ) ಜಾರಿ ಆಗದಿರುವ ಬಗ್ಗೆ | ಮಾನ್ಯ ಉನ್ನತ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 20 | **ಶ್ರೀ ಎನ್ ರವಿಕುಮಾರ್** | 12.07.2018 | ಮಂಗಳೂರು ವಿಶ್ವವಿದ್ಯಾಲಯದಲ್ಲಿ ಭ್ರಷ್ಟಾಚಾರ ನಡೆದಿರುವ ಕುರಿತು | ಸಂಬಂಧಪಟ್ಟ ಸಚಿವರಿಂದ ಉತ್ತರವನ್ನು ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 21 | **ಶ್ರೀ ಎಂ.ಕೆ ಪ್ರಾಣೇಶ್** | 12.07.2018 | ಚಿಕ್ಕಮಗಳೂರು ಜಿಲ್ಲೆ ಕೊಪ್ಪ ತಾಲ್ಲೂಕು, ಹರಿಹರಪುರ ಗ್ರಾಮಠಾಣಾದಲ್ಲಿ ನಿರ್ಮಿಸಿರುವ ವಿಶ್ವ ಮಳಿಗೆ ಕಟ್ಟಡದ ಬಗ್ಗೆ | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು |
| 22 | **ಶ್ರೀ ಬಿ.ಜಿ. ಪಾಟೀಲ್** | 12.07.2018 | ರಾಜ್ಯದಲ್ಲಿ ಇಂದಿರಾ ಕ್ಯಾಂಟೀನ್ ಅವ್ಯವಸ್ಥೆಯ ಬಗ್ಗೆ ಪ್ರಸ್ತಾಪಿಸಿದರು. | ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು ಉತ್ತರಿಸಿದರು |

**ವಿವರಣಾ ಪಟ್ಟಿ–5**
**ಗಮನ ಸೆಳೆಯುವ ಸೂಚನೆಗಳ ಪಟ್ಟಿ**

| ಕ್ರಮ ಸಂಖ್ಯೆ | ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ | ವಿಷಯ | ಚರ್ಚೆಗೆ ತೆಗೆದು ಕೊಂಡ ದಿನಾಂಕ | ಷರಾ |
|---|---|---|---|---|
| 01 | **ತಾರಾಅನೂರಾಧ** | ಕನ್ನಡ ಚಲನ ಚಿತ್ರೋದ್ಯಮದ ಸಮಗ್ರ ಅಭಿವೃದ್ಧಿಗಾಗಿ ಸರ್ಕಾರವು ಸಹಕಾರ ನೀಡುವ ಬಗ್ಗೆ | **03.07.2018** | ಮಾನ್ಯ ಸಭಾನಾಯಕರು ಉತ್ತರಿಸಿದರು |
| 02 | **ಕೆ.ಟಿ.ಶ್ರೀಕಂಠೇಗೌಡ** | ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿನ ಕೆರೆಗಳು ಒತ್ತುವರಿಯಾಗಿದ್ದು, ಸದರಿ ಕೆರೆಗಳನ್ನು ಸರ್ವೆ ಮಾಡಿ ಒತ್ತುವರಿಯನ್ನು ತೆರವುಗೊಳಿಸುವ ಬಗ್ಗೆ | **03.07.2018** | ಮಾನ್ಯ ಸಣ್ಣ ನೀರಾವರಿ ಸಚಿವರು ಉತ್ತರಿಸಿದರು |
| 03 | **ಐವನ್ ಡಿ'ಸೋಜಾ** | ದಕ್ಷಿನ ಕನ್ನಡ ಜಿಲ್ಲೆಯ ಎನ್.ಹೆಚ್–169ರ ಗುರುಪುರ ಸೇತುವೆ ದುರಸ್ಥಿ ಬಗ್ಗೆ | **04.07.2018** | ಮಾನ್ಯ ಲೋಕೋಪಯೋಗಿ ಸಚಿವರು ಉತ್ತರಿಸಿದರು |
| 04 | **ಎಂ.ಕೆ.ಪ್ರಾಣೇಶ್** | ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ವಿವಿಧ ಹುದ್ದೆಗಳನ್ನು ಸೃಜಿಸುವ ಬಗ್ಗೆ | **04.07.2018** | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು |
| 05 | **ಕೆ.ಪಿ.ನಂಜುಂಡಿ ವಿಶ್ವಕರ್ಮ** | ರಾಜ್ಯ ಸರ್ಕಾರವು ಹಿಂದುಳಿದ ವರ್ಗಗಳ ಇಲಾಖೆಗಳ ಮೂಲಕ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಿ ಜಾತಿ ಜನಗಣತಿ ನಡೆಸಿ ವರದಿಯನ್ನು ತಯಾರಿಸಿದ್ದು, ಸದರಿ ವರದಿಯನ್ನು ಬಿಡುಗಡೆ ಮಾಡಲು ವಿಳಂಬ ಮಾಡುತ್ತಿರುವ ಬಗ್ಗೆ | **06.07.2018** | ಮಾನ್ಯ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು ಉತ್ತರಿಸಿದರು. |

| | | | | |
|---|---|---|---|---|
| 06 | **ಎಸ್.ವ್ಹಿ.ಸಂಕನೂರ** | ದಿನಾಂಕ:29.06.2017 ರಂದು ಹೊರಡಿಸಿರುವ ಆದೇಶದಲ್ಲಿ ವಿಧಿಸಿರುವ ಷರತ್ತುಗಳಲ್ಲಿ "ಅನುದಾನಿತ ಶಾಲೆಯ ಫಲಿತಾಂಶವು ಕಳೆದ 5 ಶೈಕ್ಷಣಿಕ ವರ್ಷಗಳ ಸರಾಸರಿ ಫಲಿತಾಂಶಕ್ಕಿಂತ ಉತ್ತಮವಾಗಿರಬೇಕು" ಎಂಬ ಷರತ್ತನ್ನು ತೆಗೆದು ಹಾಕಬೇಕೆಂಬ ವಿಷಯದ ಬಗ್ಗೆ | **06.07.2018** | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರಿಸಿದರು. |
| 07 | **ಎನ್. ರವಿಕುಮಾರ್** | ಬೆಂಗಳೂರು, ಧಾರವಾಡ ಹಾಗೂ ರಾಯಚೂರು ಸೇರಿದಂತೆ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಕಳೆದ 20 ದಿನಗಳಿಂದ ತರಗತಿ ಬಹಿಷ್ಕರಿಸಿ ಖಾಸಗಿ ಕೃಷಿ ವಿಶ್ವವಿದ್ಯಾಲಯಗಳಲ್ಲಿ ಆಗುತ್ತಿರುವ ಅನ್ಯಾಯದ ಕುರಿತು ಹೋರಾಟ ನಡೆಸುತ್ತಿದ್ದು ರಾಜ್ಯದ ಬಡ ಪ್ರತಿಭಾವಂತ ವಿದ್ಯಾರ್ಥಿಗಳು ಎದುರಿಸುತ್ತಿರುವ ಸಮಸ್ಯೆಗಳನ್ನು ಪರಿಹರಿಸುವ ಬಗ್ಗೆ | **09.07.2018** | ಮಾನ್ಯ ಕೃಷಿ ಸಚಿವರು ಉತ್ತರಿಸಿದರು |
| 08 | **ಬಿ.ಜಿ. ಪಾಟೀಲ್** | ರಾಜ್ಯದಲ್ಲಿ ಗ್ರಾಮ ಪಂಚಾಯತಿಗಳ ಬೇಡಿಕೆ ಪಟ್ಟಿಯಲ್ಲಿ ಸುಮಾರು 6.00 ಕೋಟಿ ತೆರಿಗೆ ಸಂಗ್ರಹಣೆ ಆಗಿದ್ದು, ಬಡವರನ್ನು ಹೊರತುಪಡಿಸಿ ತೆರಿಗೆ ಸಂಗ್ರಹಣೆಯನ್ನು ಕಡ್ಡಾಯಗೊಳಿಸುವುದಕ್ಕೋಸ್ಕರ ತೆರಿಗೆ ಸಂಗ್ರಹ ವಿಚಾರದಲ್ಲಿ ಏಕರೂಪ ಮಾರ್ಗಸೂಚಿಯನ್ನು ಅನುಸರಿಸುವ ಬಗ್ಗೆ | **09.07.2018** | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| 09 | **ಎನ್.ಅಪ್ಪಾಜಿಗೌಡ** | ಮಂಡ್ಯ ಜಿಲ್ಲೆಯ ಹಾಲು ಉತ್ಪಾದಕರ ಒಕ್ಕೂಟದಲ್ಲಿ ನಡೆಯುತ್ತಿರುವ ವ್ಯಾಪಕ ಭ್ರಷ್ಟಾಚಾರದಿಂದಾಗಿ ಭಾರಿ ನಷ್ಟ ಅನುಭವಿಸುತ್ತಿರುವ ಬಗ್ಗೆ | **10.07.2018** | ಮಾನ್ಯ ಸಹಕಾರ ಸಚಿವರ ಪರವಾಗಿ ಮಾನ್ಯ ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು ಉತ್ತರಿಸಿದರು |

| | | | | |
|---|---|---|---|---|
| 10 | **ಡಾ: ತೇಜಸ್ವಿನಿಗೌಡ** | ಕರ್ನಾಟಕ ರಾಜ್ಯದಲ್ಲಿ ಅಲ್ಪಸಂಖ್ಯಾತರ ಪ್ರಾಚೀನ ಪುರಾತತ್ವ ಪಾರಂಪರಿಕ ತಾಣ ಸ್ಮಾರಕಗಳಿದ್ದು. ಸೂಕ್ತ ನಿರ್ವಹಣೆಯಿಲ್ಲದೆ ಶಿಥಿಲಾವಸ್ಥೆಯಲ್ಲಿರುವುದರಿಂದ ಅವುಗಳ ಸಂರಕ್ಷಣೆಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರಗಳು ಕೈಗೊಂಡಿರುವ ಕ್ರಮಗಳ ಬಗ್ಗೆ | **10.07.2018** | ಮಾನ್ಯ ಪ್ರವಾಸೋದ್ಯಮ ಹಾಗೂ ರೇಷ್ಮೆ ಸಚಿವರು ಉತ್ತರಿಸಿದರು. |
| 11 | **ಶ್ರೀ ಕೆ.ಪಿ.ನಂಜುಂಡಿ ವಿಶ್ವಕರ್ಮ** | ಮುಜರಾಯಿ ಇಲಾಖೆಯಲ್ಲಿ ಹಲವಾರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ನೌಕರರುಗಳ ವೇತನ ಪರಿಷ್ಕರಣೆ ಭತ್ಯೆ ಹಾಗೂ ಮತ್ತಿತರ ಸೌಲಭ್ಯಗಳನ್ನು ಕಲ್ಪಿಸುವ ಹಾಗೂ ತಾತ್ಕಾಲಿಕ ನೌಕರರನ್ನು ಖಾಯಂಗೊಳಿಸುವ ಬಗ್ಗೆ | **11.07.2018** | ಮಾನ್ಯ ಗಣಿ ಮತ್ತು ಭೂವಿಜ್ಞಾನ ಹಾಗೂ ಮುಜರಾಯಿ ಸಚಿವರು ಉತ್ತರಿಸಿದರು |
| 12 | **ಶ್ರೀ ಬಸವರಾಜ ಪಾಟೀಲ್ ಇಟಗಿ** | ರಾಯಚೂರು ವೈದ್ಯಕೀಯ ವಿಜ್ಞಾನ ಸಂಸ್ಥೆಯಲ್ಲಿನ ಸಿಬ್ಬಂದಿಗಳ ಕೊರತೆಯನ್ನು ನೀಗಿಸುವ ಬಗ್ಗೆ | **11.07.2018** | ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಹಾಗೂ ವೈದ್ಯಕೀಯ ಶಿಕ್ಷಣ ಸಚಿವರ ಪರವಾಗಿ ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು ಉತ್ತರಿಸಿದರು. |
| 13 | **ಶ್ರೀ ಪುಟ್ಟಣ್ಣ** | ಭಾಷಾ ಅಲ್ಪಸಂಖ್ಯಾತ ಹಿಂದೂ ಧರ್ಮದ ಸಂಸ್ಥೆಗಳಿಗೆ ಅಲ್ಪಸಂಖ್ಯಾತ ಸ್ಥಾನಮಾನ ನೀಡಿ ಆದೇಶ ಹೊರಡಿಸಲು ವಿಳಂಬ ಮಾಡುತ್ತಿರುವ ಅಧಿಕಾರಿಗಳ ಧೋರಣೆ ಬಗ್ಗೆ | **12.07.2018** | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರಿಸಿದರು. |

**ವಿವರಣಾ ಪಟ್ಟಿ –6**
**ನಿಯಮ 330ರ ಮೇರೆಗೆ**

| ಕ್ರಮ ಸಂಖ್ಯೆ | ಸದಸ್ಯರ ಹೆಸರು ಶ್ರೀಮತಿ:ಶ್ರೀಯುತರುಗಳಾದ: | ವಿಷಯ | ಚರ್ಚೆಗೆ ತೆಗೆದುಕೊಂಡ ದಿನಾಂಕ | ಷರಾ |
|---|---|---|---|---|
| **01** | **ಮರಿತಿಬ್ಬೇಗೌಡ** | ಪದವಿ ಪೂರ್ವ ಶಿಕ್ಷಣ ಇಲಾಖೆಯ 2018–19ನೇ ಸಾಲಿನ ಶೈಕ್ಷಣಿಕ ವೇಳಾ ಪಟ್ಟಿಯ ಸುತ್ತೋಲೆ ಹೊರಡಿಸಿ ತರಗತಿಗಳನ್ನು ಪ್ರಾರಂಭಿಸಿರುವುದರಿಂದ ಉಂಟಾಗಿರುವ ತೊಂದರೆ ಬಗ್ಗೆ | 04.07.2018 | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರಿಸಿದರು |
| **02** | **ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ( ಮಾನ್ಯ ವಿರೋಧ ಪಕ್ಷದ ಮುಖ್ಯ ಸಚೇತಕರು)** | ಸರ್ಕಾರದಿಂದ ಸ್ಥಾಪಿಸಲಾದ ಸಾವಿರಾರು ಶುದ್ಧ ಕುಡಿಯುವ ನೀರಿನ ಘಟಕಗಳು ಸರಿಯಾದ ನಿರ್ವಹಣೆ ಇಲ್ಲದೆ ಕೆಟ್ಟುನಿಂತಿದ್ದು ಕುಡಿಯುವ ನೀರು ಸಿಗದೆ ಸಾರ್ವಜನಿಕರು ತೊಂದರೆ ಅನುಭವಿಸುತ್ತಿರುವ ಬಗ್ಗೆ | 09.07.2018 | ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಉತ್ತರಿಸಿದರು. |
| **03** | **ಮರಿತಿಬ್ಬೇಗೌಡ** | ಮೈಸೂರು ವಿಶ್ವವಿದ್ಯಾಲಯದಲ್ಲಿನ ಅರ್ಹ ಅಧ್ಯಾಪಕರಿಗೆ 2011ನೇ ಸಾಲಿನಿಂದ ಪ್ಲೇಸ್‌ಮೆಂಟ್ ಮತ್ತು ಸಿ.ಎ.ಎಸ್ ಯೋಜನೆಯಡಿ ಬಡ್ತಿ ನೀಡದಿರುವುದರಿಂದ ಅಧ್ಯಾಪಕರಿಗೆ ಹಾಗೂ ಶೈಕ್ಷಣಿಕ ಪ್ರಗತಿಗೆ ಉಂಟಾಗಿರುವ ತೊಂದರೆಗಳ ಬಗ್ಗೆ | 10.07.2018 | ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು |
| **04** | **ಅ.ದೇವೇಗೌಡ** | ಬೆಂಗಳೂರು ನಗರ ಚಿಕ್ಕಪೇಟೆ ಮುಖ್ಯರಸ್ತೆಯಲ್ಲಿರುವ ಸೈಟ್ ನಂ.202–203 ಮತ್ತು 203/ಎ ಓ.ಟಿ.ಸಿ ರೋಡ್ ವಾರ್ಡ್ ಸಂಖ್ಯೆ:109ರಲ್ಲಿ ನಿಯಮ ಬಾಹಿರವಾಗಿ ವಾಣಿಜ್ಯ ಮಳಿಗೆಗಳನ್ನು ನಿರ್ಮಿಸಿದ್ದು ಸದರಿ ಕಟ್ಟಡಗಳಿಗೆ ಬೆಸ್ಕಾಂ ಮತ್ತು ಬಿ.ಬಿ.ಎಂ.ಪಿ ಯವರು ಕಾನೂನು ಬಾಹಿರವಾಗಿ ಸವಲತ್ತುಗಳನ್ನು ಒದಗಿಸಿರುವುದರಿಂದ ಸರ್ಕಾರಕ್ಕೆ ಕೋಟ್ಯಾಂತರ ರೂಪಾಯಿಗಳ ತೆರಿಗೆ ವಂಚನೆಯಾಗಿರುವ ಬಗ್ಗೆ | 10.07.2018 | ಮಾನ್ಯ ಉಪ ಮುಖ್ಯಮಂತ್ರಿಗಳು ಉತ್ತರಿಸಿದರು |

| | | | | |
|---|---|---|---|---|
| **05** | **ತಾರಾಅನೂರಾಧ** | ರಾಜ್ಯದಲ್ಲಿ ಕಬಿನಿ ಸುತ್ತಮುತ್ತಲಿನ ಅರಣ್ಯ ಪ್ರದೇಶದಲ್ಲಿ ವಾಸವಾಗಿರುವ ಕಾಡು ಜನರು ಮತ್ತು ಆದಿವಾಸಿಗಳ ಜೀವನ, ಅಧಿಕಾರಿ ವರ್ಗದವರ ಕಿರುಕುಳದಿಂದ ಶೋಚನೀಯ ಸ್ಥಿತಿಯಲ್ಲಿದ್ದು ಇವರುಗಳಿಗೆ ಆಶ್ರಯ/ಭದ್ರತೆ ಒದಗಿಸುವ ಬಗ್ಗೆ | 11.07.2018 | ಮಾನ್ಯ ಅರಣ್ಯ ಜೀವಿಶಾಸ್ತ್ರ ಮತ್ತು ಪರಿಸರ ಸಚಿವರು ಉತ್ತರಿಸಿದರು |
| **06** | **ಡಾ:ತೇಜಸ್ವಿನಿ ಗೌಡ** | ರಾಜ್ಯಾದ್ಯಂತ ಅವ್ಯಾಹತವಾಗಿ ನಡೆಯುತ್ತಿರುವ ' ಲವ್ ಜಿಹಾದ್ ' ನ ಉಪಟಳದಿಂದ ಉಂಟಾಗಿರುವ ತೊಂದರೆಗಳ ಕುರಿತು ಕ್ರಮಕೈಗೊಳ್ಳುವ ಬಗ್ಗೆ | 11.07.2018 | ಮಾನ್ಯ ಉಪ ಮುಖ್ಯಮಂತ್ರಿಗಳ ಪರವಾಗಿ ಮಾನ್ಯ ನಗರಾಭಿವೃದ್ಧಿ ಹಾಗೂ ವಸತಿ ಸಚಿವರು ಉತ್ತರಿಸಿದರು |

**ವಿವರಣಾ ಪಟ್ಟಿ –7**
**ನಿಯಮ 330ಎರ ಮೇರೆಗೆ**

| ಕ್ರಮ ಸಂಖ್ಯೆ | ಸದಸ್ಯರ ಹೆಸರು | ವಿಷಯ | ಚರ್ಚೆಗೆ ತೆಗೆದುಕೊಂಡ ದಿನಾಂಕ | ಷರಾ |
|---|---|---|---|---|
| 01 | ಶ್ರೀ ಕೆ.ಟಿ ಶ್ರೀಕಂಠೇಗೌಡ | ನೇಪಾಳ ಕೈಲಾಸ ಮಾನಸ ಸರೋವರ ಯಾತ್ರೆಗೆ ಹೋಗಿರುವ ರಾಜ್ಯದ ಯಾತ್ರಿಕರು ಪ್ರಕೃತಿ ವಿಕೋಪಕ್ಕೆ ಸಿಲುಕಿರುವ ಬಗ್ಗೆ | 03.07.2018 | ದಿ:09.07.2018ರಂದು ಉತ್ತರವನ್ನು ಮಂಡಿಸಲಾಯಿತು |
| 02 | ಶ್ರೀ ಐವನ್ ಡಿ'ಸೋಜಾ | ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 2018ನೇ ಸಾಲಿನಲ್ಲಿ ಮುಂಗಾರು ಮಳೆಯಿಂದ ಹಾನಿಯಾಗಿರುವ ಕುರಿತು | 03.07.2018 | ಮಾನ್ಯ ಸಭಾನಾಯಕರು ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |
| 03 | ಶ್ರೀ ಎಸ್.ವ್ಹಿ.ಸಂಕನೂರ | ಕಳೆದ 3 ವರ್ಷಗಳಿಂದ ಪದವಿ ಪೂರ್ವ ಶಿಕ್ಷಣದ ಉಪನ್ಯಾಸಕರುಗಳ ನೇಮಕಾತಿ ಆಗದಿರುವ ಬಗ್ಗೆ | 03.07.2018 | ಮಾನ್ಯ ಸಭಾನಾಯಕರು ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 04 | ಶ್ರೀ ಎನ್. ರವಿಕುಮಾರ್ | ರಾಜ್ಯದ ಹಿಂದುಳಿದ ಮತ್ತು ಸಮಾಜ ಕಲ್ಯಾಣ ಇಲಾಖೆಯ ವತಿಯಿಂದ ನಡೆಸುತ್ತಿರುವ ಹಾಸ್ಟೆಲ್‌ಗಳಲ್ಲಿ ಹೊರ ಗುತ್ತಿಗೆ ಆದಾರದ ಮೇಲೆ ಸೇವೆ ಸಲ್ಲಿಸುತ್ತಿದ್ದ ನೌಕರರನ್ನು ತೆಗೆದು ಹಾಕಿರುವ ಬಗ್ಗೆ | 03.07.2018 | ಮಾನ್ಯ ಸಮಾಜ ಕಲ್ಯಾಣ ಸಚಿವರು ಉತ್ತರಿಸಿದರು. |
| 05 | ಶ್ರೀ ಎಂ.ಕೆ ಪ್ರಾಣೇಶ್ | ಪ್ರಸ್ತುತ ರಾಜ್ಯ ಸರ್ಕಾರವು ಜಾರಿಗೆ ತಂದಿರುವ ಆರೋಗ್ಯ ಕರ್ನಾಟಕ ಯೋಜನೆಯು ಸಮರ್ಪಕವಾಗಿ ಅನುಷ್ಠಾನವಾಗದೇ ಸಾರ್ವಜನಿಕರಿಗೆ ತೊಂದರೆಯಾಗುತ್ತಿರುವ ಬಗ್ಗೆ | 04.07.2018 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಹಾಗೂ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ತಿಳಿಸಿದರು. |
| 06 | ಶ್ರೀ ಎನ್. ರವಿಕುಮಾರ್ | ಬೆಂಗಳೂರು, ಧಾರವಾಡ, ರಾಯಚೂರು ಸೇರಿದಂತೆ ಕೃಷಿ ವಿಶ್ವವಿದ್ಯಾಲಯಗಳ ವಿದ್ಯಾರ್ಥಿಗಳು ಕಳೆದ 20 ದಿನಗಳಿಂದ ತರಗತಿ ಬಹಿಷ್ಕರಿಸಿ ಅನ್ಯಾಯದ ವಿರುದ್ಧ ಹೋರಾಟ ನಡೆಸುತ್ತಿರುವ ಬಗ್ಗೆ | 04.07.2018 | ಮಾನ್ಯ ಉನ್ನತ ಶಿಕ್ಷಣ ಸಚಿವರು ಸದರಿ ವಿಷಯವು ಕೃಷಿ ಇಲಾಖೆಗೆ ಸಂಬಂಧಪಟ್ಟಿದ್ದು, ಕೃಷಿ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |

| | | | | |
|---|---|---|---|---|
| 07 | **ಶ್ರೀ ಕೆ.ಹರೀಶ್‌ಕುಮಾರ್** | ರಾಜ್ಯದಲ್ಲಿ ಪ್ರಥಮ ದರ್ಜೆ ಕಾಲೇಜುಗಳು ಪ್ರಾರಂಭಗೊಂಡಿದ್ದರೂ ಈವರೆವಿಗೂ ಅತಿಥಿ ಉಪನ್ಯಾಸಕರುಗಳನ್ನು ನೇಮಕ ಮಾಡದೆ ಇರುವುದರಿಂದ ವಿದ್ಯಾರ್ಥಿಗಳಿಗೆ ತೊಂದರೆಯಾಗಿರುವ ಬಗ್ಗೆ | 04.07.2018 | ಮಾನ್ಯ ಉನ್ನತ ಶಿಕ್ಷಣ ಸಚಿವರು ಉತ್ತರಿಸಿದರು. |
| 08 | **ಶ್ರೀಮತಿ ಜಯಮ್ಮ** | ಗೊಲ್ಲ ಜನಾಂಗವನ್ನು ಪರಿಶಿಷ್ಠ ಪಂಗಡಕ್ಕೆ ಸೇರಿಸಬೇಕೆಂಬ ವಿಷಯದ ಬಗ್ಗೆ | 04.07.2018 | ಸಂಬಂಧಪಟ್ಟ ಸಚಿವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 09 | **ಡಾ:ತೇಜಸ್ವಿನಿಗೌಡ** | ಕೇರಳದ ಕೊಚ್ಚಿಯಿಂದ ವಿದ್ಯಾಭ್ಯಾಸಕ್ಕೆ ಬಂದಿರುವ ಯುವತಿಯೊಬ್ಬಳನ್ನು ಲವ್-ಜಿಹಾದ್ ಹೆಸರಿನಲ್ಲಿ ಬಳಸಿಕೊಂಡಿರುವ ಬಗ್ಗೆ | 04.07.2018 | ಮಾನ್ಯ ಉಪ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ಮಾನ್ಯ ಸಭಾನಾಯಕರು ತಿಳಿಸಿದರು. |
| 10 | **ಶ್ರೀ ಕೆ.ಪಿ. ನಂಜುಂಡಿ ವಿಶ್ವಕರ್ಮ** | ಚನ್ನಪಟ್ಟಣ ತಾಲ್ಲೂಕಿನ ಕಣ್ವ ಜಲಾಶಯದಿಂದ ದಶವಾರ ಮಾರ್ಗವಾಗಿ ಹಲವಾರು ಗ್ರಾಮಗಳನ್ನು ಹಾದು ಹೋಗುವ ನೀರಾವರಿ ಕಾಲುವೆ ದುರಸ್ಥಿಯಲ್ಲಿರುವ ಬಗ್ಗೆ | 06.07.2018 | ಮಾನ್ಯ ಸಣ್ಣ ನೀರಾವರಿ ಸಚಿವರು ಮಾನ್ಯ ಬೃಹತ್ ಮತ್ತು ಮಧ್ಯಮ ನೀರಾವರಿ ಮತ್ತು ವೈದ್ಯಕೀಯ ಶಿಕ್ಷಣ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |
| 11 | **ಶ್ರೀ ಎನ್ ರವಿಕುಮಾರ್** | ನೊಂದಣಿ ಮತ್ತು ಮುದ್ರಾಂಖ ಇಲಾಖೆಯು ಜಾರಿಗೆ ತಂದಿರುವ ಆನ್‌ಲೈನ್‌ನಲ್ಲಿ ಆಸ್ತಿ ನೊಂದಣಿ ಮಾಡುವ ಪ್ರಕ್ರಿಯೆಯಲ್ಲಿರುವ ಲೋಪದೋಷಗಳ ಬಗ್ಗೆ | 06.07.2018 | ಮಾನ್ಯ ಸಭಾನಾಯಕರು ಮಾನ್ಯ ಕಂದಾಯ ಸಚಿವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು. |
| 12 | **ಶ್ರೀ ಎಂ.ಪಿ. ಸುನೀಲ್ ಸುಬ್ರಮಣಿ** | ರಾಜ್ಯದ 27 ಜಿಲ್ಲೆಗಳಲ್ಲಿ ಶಾಲಾ ವಿದ್ಯಾರ್ಥಿಗಳಿಗೆ ಸಮವಸ್ತ್ರ ವಿತರಣೆ ಮಾಡುವಲ್ಲಿ ವಿಳಂಬವಾಗಿರುವ ಬಗ್ಗೆ | 06.07.2018 | ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಉತ್ತರ ನೀಡಲು ಕಾಲಾವಕಾಶ ಕೋರಿದರು. |
| 13 | **ಶ್ರೀಮತಿ ತಾರಾಅನೂರಾಧ** | ಶ್ರೀ ಕೃಷ್ಣೇಗೌಡ, ಇಲಿಯಾಜ್ ನಗರ, ಬೆಂಗಳೂರು ಇವರು ಶಾಶ್ವತವಾಗಿ ಅಂಗವಿಕಲನಾಗಿರುವುದರಿಂದ ಜೀವನೋಪಾಯಕ್ಕೆ ಬನಶಂಕರಿ 2ನೇ ಹಂತದಲ್ಲಿರುವ ಬಿ.ಡಿ.ಎ. ಕಾಂಪ್ಲೆಕ್ಸ್‌ನಲ್ಲಿ ಅವರಿಗೆ ಮಳಿಗೆ ಹಂಚಿಕೆ ಮಾಡುವ ಬಗ್ಗೆ | 06.07.2018 | ಮಾನ್ಯ ಸಭಾನಾಯಕರು ಮಾನ್ಯ ಮುಖ್ಯಮಂತ್ರಿಯವರಿಂದ ಉತ್ತರ ಕೊಡಿಸುವುದಾಗಿ ತಿಳಿಸಿದರು |

**ವಿವರಣಾ ಪಟ್ಟಿ –08**

**ಸದನಕ್ಕೆ ಒಪ್ಪಿಸಲಾದ ವರದಿಗಳ ಪಟ್ಟಿ**

| ಕ್ರ. ಸಂ | ಸಮಿತಿಯ ಹೆಸರು | ಒಪ್ಪಿಸಿದ ದಿನಾಂಕ | ವಿಷಯ |
|---|---|---|---|
| 01 | ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿ | 06.07.2018 | ನಗರಾಭಿವೃದ್ಧಿ ಇಲಾಖೆಗೆ ಸಂಬಂಧಪಟ್ಟ ಭರವಸೆ ಸಂಖ್ಯೆ;5356/2015 ಹಾಗೂ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆಗೆ ಸಂಬಂಧಪಟ್ಟ ಭರವಸೆ ಸಂಖ್ಯೆ 5424/2014 ಗಳಿಗೆ ಸಂಬಂಧಿಸಿದ ವಿಶೇಷ ವರದಿ I ಮತ್ತು II |
| 02 | ವಿಧಾನ ಮಂಡಲದ ಅಧೀನ ಶಾಸನಾ ರಚನಾ ಸಮಿತಿ | 06.07.2018 | 46ನೇ ವರದಿ |
| 03 | ವಿಧಾನ ಪರಿಷತ್ತಿನ ಅರ್ಜಿಗಳ ಸಮಿತಿ | 11.07.2018 | 24, 25 ಹಾಗೂ 26ನೇ ವರದಿ |
| 04 | ವಿಧಾನ ಪರಿಷತ್ತಿನ ವಿಶೇಷ ಸದನ ಸಮಿತಿ | 12.07.2018 | ಕರ್ನಾಟಕ ರಾಜ್ಯದಲ್ಲಿ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಹಾಗೂ ಖರೀದಿಸಲು ಅನುಸರಿಸಿರುವ ಮಾನದಂಡ ಹಾಗೂ ಖರೀದಿಗೆ ತಗುಲಿದ ವೆಚ್ಚ ಮತ್ತು ಈವರೆಗೆ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಲ್ಯಾಪ್‌ಟಾಪ್‌ಗಳ ಬಗ್ಗೆ ಸದನ ಸಮಿತಿ ವರದಿ |

**ಶಾಸನ ರಚನೆ–09**

**ವಿಧಾನ ಸಭೆಯಲ್ಲಿ ಅಂಗೀಕೃತಗೊಂಡು ವಿಧಾನ ಪರಿಷತ್ತಿನ ಸಹಮತಿ ಪಡೆದಿರುವ ವಿಧೇಯಕಗಳ ವಿವರ**

| ಕ್ರ ಸಂ | ವಿಧೇಯಕದ ಹೆಸರು | ವಿ .ಸ ಅಂಗೀಕರಿಸಿರುವ ದಿನಾಂಕ | ವಿ. ಪ ಅಂಗೀಕರಿಸಿರುವ ದಿನಾಂಕ |
|---|---|---|---|
| 01 | **ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2018** | 12.07.2018 | 12.07.2018 |
| 02 | **ಕರ್ನಾಟಕ ಮೌಲ್ಯವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018** | 12.07.2018 | 12.07.2018 |
| 03 | **ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2018** | 12.07.2018 | 12.07.2018 |
| 04 | **ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018** | 12.07.2018 | 12.07.2018 |

******

# <u>ಸಾರಾಂಶ</u>

ವಿಧಾನ ಪರಿಷತ್ತಿನ 135ನೇ ಅಧಿವೇಶನದಲ್ಲಿ ನಡೆದಿರುವ ಕಾರ್ಯಕಲಾಪಗಳ ವಿವರವನ್ನು ಸದನಕ್ಕೆ ತಿಳಿಸಲು ಇಚ್ಛಿಸುತ್ತೇನೆ. ಪ್ರಸ್ತುತ ಅಧಿವೇಶನವು ದಿನಾಂಕ:02.07.2018 ರಿಂದ 12.07.2018ರವರೆಗೆ ಒಟ್ಟು 11 ದಿನಗಳು ಅಂದರೆ, 53 ಗಂಟೆ 53 ನಿಮಿಷಗಳು ನಡೆಸಲಾಗಿರುತ್ತದೆ.

ದಿನಾಂಕ:02.07.2018ರಂದು ಅಪರಾಹ್ನ 12.15 ಗಂಟೆಗೆ ಘನತೆವೆತ್ತ ರಾಜ್ಯಪಾಲರು ವಿಧಾನ ಮಂಡಲದ ಉಭಯ ಸದನಗಳನ್ನುದ್ದೇಶಿಸಿ ಭಾಷಣ ಮಾಡುವುದರೊಂದಿಗೆ ಪ್ರಾರಂಭಗೊಂಡಿತು.

ರಾಜ್ಯಪಾಲರ ಭಾಷಣದ ನಂತರ ಮಧ್ಯಾಹ್ನ 01.40 ಗಂಟೆಗೆ ವಿಧಾನ ಪರಿಷತ್ತಿನ ಸಭಾಂಗಣದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಯಿತು. ಘನತೆವೆತ್ತ ರಾಜ್ಯಪಾಲರು ಉಭಯ ಸದನಗಳನ್ನುದ್ದೇಶಿಸಿ ಮಾಡಿದ ಭಾಷಣದ ಪ್ರತಿಯನ್ನು ಮಂಡಿಸಲಾಯಿತು. ದಿನಾಂಕ:04.07.2018ರಂದು ಸದನವು ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದಂತೆ ವಂದನಾರ್ಪಣಾ ನಿರ್ಣಯವನ್ನು ಸದನವು ಅಂಗೀಕರಿಸಿತು.

ಕಳೆದ ಅಧಿವೇಶನದಿಂದೀಚೆಗೆ ನಿಧನರಾದ ಗಣ್ಯರುಗಳಿಗೆ ಸದನವು ತನ್ನ ಸಂತಾಪವನ್ನು ವ್ಯಕ್ತಪಡಿಸಿತು.

ದಿನಾಂಕ:05.07.2018ರಂದು 2018-2019ನೇ ಸಾಲಿನ ಆಯವ್ಯಯ ಅಂದಾಜುಗಳನ್ನು ಸದನದಲ್ಲಿ ಮಂಡಿಸಲಾಗಿದ್ದು, ಆಯವ್ಯಯ ಅಂದಾಜುಗಳ ಮೇಲೆ 13.00 ಗಂಟೆಗಳ ಕಾಲ ಚರ್ಚೆಯಾಗಿ ಸರ್ಕಾರದಿಂದ ಉತ್ತರಿಸಲಾಗಿರುತ್ತದೆ.

ಭಾರತ ಸಂವಿಧಾನದ 151(2)ನೇ ಅನುಚ್ಛೇದದ ಮೇರೆಗೆ 31ನೇ ಮಾರ್ಚ್, 2017ಕ್ಕೆ ಕೊನೆಗೊಂಡ ವರ್ಷಕ್ಕೆ ಭಾರತದ ಲೆಕ್ಕನಿಯಂತ್ರಕರು ಮತ್ತು ಮಹಾ ಲೆಕ್ಕಪರಿಶೋಧಕರು ನೀಡಿರುವ ರಾಜ್ಯ ಸರ್ಕಾರದ ಹಣಕಾಸಿನ ವ್ಯವಹಾರಗಳು (ಸಂಖ್ಯೆ-1) ಹಾಗೂ ಸಾಮಾನ್ಯ ಮತ್ತು ಸಾಮಾಜಿಕ ವಲಯ (ಸಂಖ್ಯೆ-2) ವರದಿಗಳನ್ನು ಮಂಡಿಸಲಾಯಿತು.

ಸಭೆಯ ಮುಂದಿಡಲಾಗುವ ಕಾಗದ ಪತ್ರಗಳ ಒಂದು, ಎರಡು ಮತ್ತು ಮೂರು ಪಟ್ಟಿಗಳನ್ನು, ಅಧೀನ ಶಾಸನ ರಚನಾ ಸಮಿತಿಯ 46ನೇ ವರದಿ, ಭರವಸೆಗಳ ಸಮಿತಿಯ ವಿಶೇಷ ವರದಿ-I ಮತ್ತು ವರದಿ-II, ಅರ್ಜಿಗಳ ಸಮಿತಿಯ 24ನೇ, 25ನೇ ಹಾಗೂ 26ನೇ ವರದಿ, 4ನೇ ಹಣಕಾಸು ಆಯೋಗವು ರಾಜ್ಯದ ಪಂಚಾಯತ್ ರಾಜ್ ಸಂಸ್ಥೆಗೆ ಮತ್ತು ನಗರ ಸ್ಥಳೀಯ ಸಂಸ್ಥೆಗಳಿಗೆ ಅನುದಾನ ಹಂಚಿಕೆ ಮತ್ತು ಇತರೆ ಅಧಿಕಾರದ ಬಗ್ಗೆ ನೀಡಿರುವ ವರದಿ ಮತ್ತು ರಾಜ್ಯದಲ್ಲಿ ಕಾಲೇಜು ಶಿಕ್ಷಣ ಮತ್ತು ತಾಂತ್ರಿಕ ಶಿಕ್ಷಣ ಇಲಾಖೆ ವತಿಯಿಂದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್‌ಗಳನ್ನು ವಿತರಿಸಲು ಹಾಗೂ ಖರೀದಿಸಲು ಅನುಸರಿಸಿರುವ ಮಾನದಂಡ ಹಾಗೂ ಖರೀದಿಗೆ ತಗುಲಿದ ವೆಚ್ಚ ಮತ್ತು ಈವರೆಗೆ ವಿದ್ಯಾರ್ಥಿಗಳಿಗೆ ವಿತರಿಸಲಾಗಿರುವ ಲ್ಯಾಪ್‌ಟಾಪ್‌ಗಳ ಬಗ್ಗೆ ಪರಿಶೀಲಿಸಲು ರಚಿಸಲಾದ ವಿಶೇಷ ಸದನ ಸಮಿತಿಯ ವರದಿಯನ್ನು ಸದನದ ಮುಂದೆ ಮಂಡಿಸಲಾಯಿತು.

2018-2019ನೇ ಸಾಲಿನ ವಿಧಾನ ಮಂಡಲ/ವಿಧಾನ ಪರಿಷತ್ತಿನ ವಿವಿಧ ಸಮಿತಿಗಳಿಗೆ ಚುನಾವಣೆ ನಡೆಸುವ ಬದಲು ಮಾನ್ಯ ಸದಸ್ಯರುಗಳನ್ನು ನಾಮನಿರ್ದೇಶಿಸಲು ಮಾನ್ಯ ಸಭಾಪತಿಯವರಿಗೆ ಅಧಿಕಾರ ನೀಡುವ ಪ್ರಸ್ತಾವನೆಯನ್ನು ಮಂಡಿಸಿ ಸದನದ ಸಹಮತಿಯನ್ನು ಪಡೆಯಲಾಯಿತು.

ಪ್ರಸ್ತುತ ಅಧಿವೇಶನದಲ್ಲಿ 345 ಪ್ರಶ್ನೆಗಳನ್ನು ಸ್ವೀಕರಿಸಿದ್ದು, ಅದರಲ್ಲಿ 60 ಪ್ರಶ್ನೆಗಳನ್ನು ಚುಕ್ಕೆ ಗುರುತಿನ ಪ್ರಶ್ನೆಗಳನ್ನಾಗಿ ಅಂಗೀಕರಿಸಿದ್ದು, 48 ಪ್ರಶ್ನೆಗಳಿಗೆ ಸದನದಲ್ಲಿ ಉತ್ತರಿಸಲಾಯಿತು ಮತ್ತು ಲಿಖಿತ ಮೂಲಕ ಉತ್ತರಿಸುವ ಒಟ್ಟು 285 ಪ್ರಶ್ನೆಗಳ ಪೈಕಿ 219 ಪ್ರಶ್ನೆಗಳಿಗೆ ಉತ್ತರವನ್ನು ಮಂಡಿಸಲಾಯಿತು.

ನಿಯಮ 72ರಡಿಯಲ್ಲಿ 62 ಸೂಚನೆಗಳನ್ನು ಸ್ವೀಕರಿಸಿದ್ದು, 14 ಸೂಚನೆಗಳಿಗೆ ಹಾಗೂ ನಿಯಮ 330ರಡಿಯಲ್ಲಿ 24 ಸೂಚನೆಗಳನ್ನು ಸ್ವೀಕರಿಸಿದ್ದು, 06 ಸೂಚನೆಗಳಿಗೆ ಉತ್ತರಿಸಲಾಯಿತು. ನಿಯಮ 72ರ 15 ಸೂಚನೆಗಳಿಗೆ ಮತ್ತು ನಿಯಮ 330ರ 03 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ಶೂನ್ಯ ವೇಳೆಯ ಒಟ್ಟು 23 ಪ್ರಸ್ತಾವಗಳ ಪೈಕಿ 18 ಪ್ರಸ್ತಾವಗಳಿಗೆ ಹಾಗೂ ವಿಶೇಷ ಪ್ರಸ್ತಾವದ ನಿಯಮ 330ಎ ರಡಿಯಲ್ಲಿ ಒಟ್ಟು 13 ಪ್ರಸ್ತಾವಗಳನ್ನು ಸ್ವೀಕರಿಸಿ 02 ಪ್ರಸ್ತಾವಗಳಿಗೆ ಉತ್ತರಿಸಲಾಯಿತು ಹಾಗೂ 02 ಸೂಚನೆಗಳಿಗೆ ಉತ್ತರಗಳನ್ನು ಮಂಡಿಸಲಾಯಿತು.

ನಿಯಮ 58ರ ಅಡಿಯಲ್ಲಿ 01 ಸೂಚನೆಯನ್ನು ಸ್ವೀಕರಿಸಲಾಗಿತ್ತು. ಆದರೆ, ಚರ್ಚೆಗೆ ಬಂದಿರುವುದಿಲ್ಲ.

ನಿಯಮ 68ರ ಅಡಿಯಲ್ಲಿ 01 ಸೂಚನೆಯನ್ನು ಸ್ವೀಕರಿಸಿದ್ದು, ಸದನದಲ್ಲಿ ಚರ್ಚೆಗೆ ಬಂದಿರುವುದಿಲ್ಲ.

ವಿಧಾನ ಸಭೆಯಿಂದ ಅಂಗೀಕೃತ ರೂಪದಲ್ಲಿರುವ ಈ ಮುಂದಿನ ವಿಧೇಯಕಗಳಿಗೆ ವಿಧಾನ ಪರಿಷತ್ತು ತನ್ನ ಸಹಮತಿಯನ್ನು ನೀಡಿರುತ್ತದೆ.

01. ಕರ್ನಾಟಕ ಧನವಿನಿಯೋಗ (ಸಂಖ್ಯೆ.2) ವಿಧೇಯಕ, 2018
02. ಕರ್ನಾಟಕ ಮೌಲ್ಯ ವರ್ಧಿತ ತೆರಿಗೆ (ತಿದ್ದುಪಡಿ) ವಿಧೇಯಕ, 2018
03. ಕರ್ನಾಟಕ ಮೋಟಾರು ವಾಹನಗಳ ತೆರಿಗೆ ನಿರ್ಧರಣೆ (ತಿದ್ದುಪಡಿ) ವಿಧೇಯಕ, 2018
04. ಕರ್ನಾಟಕ ವಿದ್ಯುಚ್ಛಕ್ತಿ (ಬಳಕೆ ಅಥವಾ ಮಾರಾಟದ ಮೇಲೆ ತೆರಿಗೆ ನಿರ್ಧರಣೆ) (ತಿದ್ದುಪಡಿ) ವಿಧೇಯಕ, 2018

ಮಾನ್ಯ ಮುಖ್ಯಮಂತ್ರಿಗಳಿಗೆ, ಸಭಾನಾಯಕರಿಗೆ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರಿಗೆ, ವಿರೋಧ ಪಕ್ಷದ ನಾಯಕರಿಗೆ, ಎಲ್ಲಾ ಮಂತ್ರಿ ವರ್ಗದವರಿಗೆ, ವಿರೋಧ ಪಕ್ಷದ ಮುಖ್ಯ ಸಚೇತಕರಿಗೆ, ಪತ್ರಿಕಾ ಹಾಗೂ ಮಾಧ್ಯಮ ವರದಿಗಾರರಿಗೆ, ವಿಧಾನ ಪರಿಷತ್ತಿನ ಸಚಿವಾಲಯದ ಅಧಿಕಾರಿ/ನೌಕರ ವರ್ಗದವರಿಗೆ ಮತ್ತು ಸರ್ಕಾರದ ಎಲ್ಲಾ ಅಧಿಕಾರಿ/ನೌಕರ ವೃಂದದವರಿಗೆ ಸದನದ ಕಾರ್ಯಕಲಾಪಗಳನ್ನು ಸುಗಮವಾಗಿ ನಡೆಸಲು ಸಹಕರಿಸಿದ್ದಕ್ಕೆ ತುಂಬು ಹೃದಯದ ಧನ್ಯವಾದಗಳನ್ನು ಸಲ್ಲಿಸುತ್ತಾ, **ಸದನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಯಿತು**.

****